# A

**18718** **120 MINUTES**

1. ಕನ್ನಡ ನಾಡಿನ ಮೇರೆಗಳನ್ನು ಸೂಚಿಸುವ ಪ್ರಾಚೀನ ಕೃತಿ:
   A) ಶಾಂತಿಪುರಾಣ B) ಚಾವುಂಡರಾಯ ಪುರಾಣ
   C) ಕಬ್ಬಿಗರ ಕಾವ D) ಕವಿರಾಜಮಾರ್ಗ

2. ಸಿದ್ಧರಾಮನ ವಚನಗಳ ಅಂಕಿತ
   A) ಕೂಡಲ ಚನ್ನಸಂಗಮ ದೇವ B) ಚೆನ್ನಮಲ್ಲಿಕಾರ್ಜುನ
   C) ಕಪಿಲಸಿದ್ಧ ಮಲ್ಲಿಕಾರ್ಜುನ D) ಗುಹೇಶ್ವರ.

3. ನವ್ಯ ಸಾಹಿತ್ಯದ ಪ್ರವರ್ತಕರು:
   A) ಬರಗೂರು ರಾಮಚಂದ್ರಪ್ಪ B) ಗೋಪಾಲಕೃಷ್ಣ ಅಡಿಗ
   C) ವಿನಾಯಕ ಕೃಷ್ಣ ಗೋಕಾಕ D) ಅ.ನ.ಕೃ.

4. ಇವರಲ್ಲಿ ಛಂದೋಗ್ರಂಥವನ್ನು ರಚಿಸಿದವರು:
   A) ನಾಗರಾಜ B) ಮೊದಲನೆಯ ನಾಗವರ್ಮ
   C) ನಯಸೇನ D) ಎರಡನೆಯ ಗುಣವರ್ಮ.

5. "ಬೇಲೂರಿನ ಶಿಲಾಬಾಲಿಕೆಯರು" ಕವನವನ್ನು ಬರೆದ ಕವಿ.
   A) ಡಿ.ವಿ.ಜಿ B) ಕೆ.ಎಸ್.ನರಸಿಂಹಸ್ವಾಮಿ
   C) ಪು.ತಿ.ನ D) ದಿನಕರ ದೇಸಾಯಿ

6. ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದು ಒಂದಿ ದೇಸಿಯೊಳ್ ಪುಗುವುದು – ಈ ಸಾಲು ಬರುವ ಕೃತಿ
   A) ಧರ್ಮಾಮೃತ B) ಲೀಲಾವತಿ ಪ್ರಬಂಧ
   C) ಅನಂತನಾಥ ಪುರಾಣ D) ವಿಕ್ರಮಾರ್ಜುನ ವಿಜಯ

7. ತ್ರಿಪದಿ ಛಂದಸ್ಸಿನಲ್ಲಿರುವ ಮೊತ್ತಮೊದಲ ಶಾಸನ
   A) ತಳಂಗೆರೆ ಶಾಸನ B) ಬಾದಾಮಿ ಶಾಸನ
   C) ತಮ್ಮಟಕಲ್ಲು ಶಾಸನ D) ದೇಕಬ್ಬೆ ಶಾಸನ

8. ಕನ್ನಡ ಭಾಷೆಯಲ್ಲಿ ವಿಷ್ಣುಪುರಾಣವನ್ನು ಆಧರಿಸಿ ಕಾವ್ಯ ರಚಿಸಿದವರು
   A) ಆಂಡಯ್ಯ B) ಪೊನ್ನ C) ರುದ್ರ ಭಟ್ಟ D) ನೇಮಿಚಂದ್ರ

9. “ಕುರುಡು ಕಾಂಚಾಣ ಕುಣಿಯುತಲಿತ್ತೊ
ಕೆಳಗೆ ಸಿಕ್ಕವರನ್ನು ತುಳಿಯುತಲಿತ್ತೊ” – ಈ ಸಾಲನ್ನು ಬರೆದ ಕವಿ

A) ದ.ರಾ. ಬೇಂದ್ರೆ
B) ಚೆನ್ನವೀರ ಕಣವಿ
C) ಪಂಜೆ ಮಂಗೇಶರಾವ್
D) ಎಂ .ಎನ್ .ಕಾಮತ್

10. ‘ಸಾಹಿತ್ಯ ಮತ್ತು ಪರಂಪರೆ’ ಕೃತಿಯನ್ನು ಬರೆದವರು

A) ಎಲ್.ಎಸ್. ಶೇಷಗಿರಿ ರಾವ್
B) ಜಿ. ಎಚ್. ನಾಯಕ
C) ಗಿರಡ್ಡಿ ಗೋವಿಂದ ರಾಜ
D) ಕೀರ್ತಿನಾಥ ಕುರ್ತಕೋಟಿ

11. “ಪ್ರಿನ್ಸಿಪಲ್ಸ್ ಆಫ್ ಲಿಟರರಿ ಕ್ರಿಟಿಸಿಸಂ” ಗ್ರಂಥದ ಕರ್ತೃ

A) ಎಜ್ರಾಪೌಂಡ್
B) ಅಯ್. ಎ. ರಿಚರ್ಡ್ಸ್
C) ಕೋಲ್‌ರಿಜ್
D) ವರ್ಡ್ಸ್‌ವರ್ತ್

12. ಇವು ಘೋಷ ಧ್ವನಿಮಾಗಳು

A) ಕ್,ಚ್,ಟ್
B) ಗ್,ಜ್,ದ್
C) ತ್,ಪ್,ಠ್
D) ಖ್,ಛ್,ಥ್

13. ಕನ್ನಡದಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಕೃತಿಗಳನ್ನು ರಚಿಸಿದವರು

A) ಜಿ.ಪಿ. ರಾಜರತ್ನಂ
B) ಬಿ.ಎಂ.ಶ್ರೀಕಂಠಯ್ಯ
C) ವೀ. ಸೀತಾರಾಮಯ್ಯ
D) ಕೆ.ಎಸ್.ನಿಸಾರ್ ಅಹಮ್ಮದ್.

14. ಪಾಶ್ಚಾತ್ಯ ಕಾವ್ಯ ಮಿಮಾಂಸೆಯ “ಇಮ್ಯಾಜಿನೇಷನ್” ಗೆ ಸಂವಾದಿಯಾದ ಭಾರತೀಯ ಕಾವ್ಯತತ್ವ

A) ಔಚಿತ್ಯ B) ಪ್ರತಿಭೆ C) ಕವಿಸಮಯ D) ಶಬ್ದಶಕ್ತಿ

15. “ಮುಖವೀಣೆ” ಯನ್ನು ಬಳಸುವ ರಂಗಪ್ರಕಾರ

A) ಯಕ್ಷಗಾನ ಬಯಲಾಟ
B) ಸೂತ್ರದ ಗೊಂಬೆಯಾಟ
C) ಶ್ರೀಕೃಷ್ಣ ಪಾರಿಜಾತ
D) ಮೂಡಲಪಾಯ

16. ಪೋದೊನ್, ವಿಟ್ಟಾರ್, ಇವು ಕನ್ನಡ ಭಾಷೆಯ ಯಾವ ರೂಪಕ್ಕೆ ನಿದರ್ಶನಗಳು

A) ಮಧ್ಯ ಕಾಲದ ಕನ್ನಡ
B) ಹಳಗನ್ನಡ
C) ಪೂರ್ವದ ಹಳಗನ್ನಡ
D) ನಡುಗನ್ನಡ

17. ಭಾರತದ ಮೊತ್ತಮೊದಲ ಪತ್ರಿಕೆ

A) ಹಿಕ್ಕೀಸ್ ಗೆಜೆಟ್
B) ಇಂಡಿಯಾ ಗೆಜೆಟ್
C) ಕಲ್ಕತ್ತಾ ಜರ್ನಲ್
D) ಮಿಡ್ ಡೇ

18. ಪೌರಾಣಿಕ ವಸ್ತುವನ್ನು ಆಧರಿಸಿ ನಾಟಕಗಳನ್ನು ರಚಿಸಿದವರು

A) ಎಚ್. ಎಸ್.ಶಿವಪ್ರಕಾಶ್
B) ಪರ್ವತವಾಣಿ
C) ಚಂದ್ರಕಾಂತ ಕುಸನೂರ
D) ಶ್ರೀಕಂಠೇಗೌಡ

19. ಪ್ರಾಚೀನ ಕವಿಗಳ ಕಾಲ, ಮತ, ಮತ್ತು ದೇಶಗಳನ್ನು ಕುರಿತು ಹೆಚ್ಚಿನ ಸಂಶೋಧನೆ ಮಾಡಿದವರು.

A) ಎಂ. ಎಸ್. ಸುಂಕಾಪುರ B) ಎಸ್.ವಿ.ರಂಗಣ್ಣ

C) ಗೋವಿಂದ ಪೈ D) ಎ.ಎನ್. ಮೂರ್ತಿರಾವ್

20. "ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ ರಸಮೊಸರೆ......ತಿರುಳ್ಗನ್ನಡದೊಳ್ ಕಥೆಯನುಸಿರ್ವೆಂ" ಎಂಬ ಮಾತು ಕಂಡು ಬರುವ ಕೃತಿ

A) ಭರತೇಶ ವೈಭವ B) ರಾಮಾಶ್ವಮೇಧ

C) ಅದ್ಭುತ ರಾಮಾಯಣ D) ಮುದ್ರಾಮಂಜೂಷ.

21. ಇದು ಸಂಶೋಧನೆಯ ಒಂದು ಪ್ರಕಾರ

A) ಸಾಮಗ್ರಿಗಳ ವರ್ಗೀಕರಣ B) ಪುನರಾವರ್ತನ ಸಂದರ್ಶನ

C) ಸಹಭಾಗೀ ಅವಲೋಕನ D) ವಿಶ್ಲೇಷಣ ಮುಖಿ

22. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ

A) ಅರ್ಥವ್ಯಕ್ತಿ ಕಾವ್ಯದೋಷ

B) ಅಭಿಧಾ ವ್ಯಂಗ್ಯಾರ್ಥ

C) ರೀತಿ ಪದರಚನಾ ವಿಶೇಷ

D) ಲಕ್ಷಣಾ ವಾಚ್ಯಾರ್ಥ.

23. ದ್ರಾವಿಡ ಭಾಷೆಗಳಲ್ಲಿ ಲಿಂಗವ್ಯವಸ್ಥೆಯ ತಳಹದಿ:

1. ಬುದ್ಧಿ ಇದ್ದುದು ಮತ್ತು ಬುದ್ಧಿ ಇಲ್ಲದುದು

2. ಜೀವ ಇದ್ದುದು ಮತ್ತು ಜೀವ ಇಲ್ಲದುದು

ಸರಿಯಾದ ಉತ್ತರ.

A) ಒಂದನೇ ಹೇಳಿಕೆ ಸರಿ, ಎರಡನೇ ಹೇಳಿಕೆ ತಪ್ಪು

B) ಒಂದನೇ ಹೇಳಿಕೆ ತಪ್ಪು, ಎರಡನೇ ಹೇಳಿಕೆ ಸರಿ

C) ಎರಡು ಹೇಳಿಕೆಗಳೂ ತಪ್ಪು

D) ಎರಡು ಹೇಳಿಕೆಗಳೂ ಸರಿ.

24. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ

A) ಮಾಸ್ತಿ ವೆಂಕಟೇಶ ಅಯ್ಯಂಗಾರ್ ಕಾಕನ ಕೋಟೆ

B) ಕೆ.ವಿ. ತಿರುಮಲೇಶ್ ನಲ್ಮೆ

C) ವಿ. ಕೃ. ಗೋಕಾಕ ದ್ಯಾವಾ ಪೃಥಿವಿ

D) ಕಯ್ಯಾರ ಕಿಞ್ಞಣ್ಣ ರೈ ಪುನರ್ನವ

25. ನಾಯಿಯ ಹಿರಿಮೆಯನ್ನು ಸಾರುವ ಶಾಸನ

A) ಲಕ್ಕುಂಡಿ ಶಾಸನ B) ಗಂಗಾಧರಂ ಶಾಸನ

C) ಆತಕೂರು ಶಾಸನ D) ಬೆಳತೂರಿನ ಶಾಸನ

26. "ಜನಪನಪಕೀರ್ತ್ಯಂಗನೆಗೆ ತುಡಿಸಿದನು ಭೂಷಣವ" – ಇಲ್ಲಿರುವ ಅಲಂಕಾರ
A) ಉಪಮಾ B) ರೂಪಕ
C) ಶ್ಲೇಷೆ D) ಉತ್ಪ್ರೇಕ್ಷೆ

27. "ರಕ್ಷಾಶತಕ" ದ ಕರ್ತೃ
A) ಪುಲಿಗೆರೆಯ ಸೋಮ B) ಮಗ್ಗೆಯ ಮಾಯಿದೇವ
C) ಹರಿಹರ D) ವಿರೂಪಾಕ್ಷ ಪಂಡಿತ

28. ಬಸವಣ್ಣನವರನ್ನು ಕುರಿತ ನಾಟಕ
A) ಬಕ B) ಕತ್ತಲೆ ಬೆಳಕು C) ಹಯವದನ D) ತಲೆದಂಡ

29. "ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಣವೇ ಕಡೆಗೀಲು" ಎಂದು ಹೇಳಿದ ವಚನಕಾರ
A) ಅಲ್ಲಮ ಪ್ರಭು B) ಜೇಡರ ದಾಸಿಮಯ್ಯ
C) ಆದಯ್ಯ D) ಬಸವಣ್ಣ

30. "ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು" ಕೃತಿಯನ್ನು ಬರೆದವರು
A) ಜಿ.ಶಂ. ಪರಮಶಿವಯ್ಯ B) ಬಿ.ಎ. ವಿವೇಕ ರೈ
C) ಪಿ.ಕೆ. ರಾಜಶೇಖರ D) ತೀ. ನಂ. ಶಂಕರನಾರಾಯಣ.

31. ಗವೇಷಣೆ, ಅಭ್ಯಾಸ – ಈ ಪದಗಳಲ್ಲಿ ಕಾಣಿಸಿಕೊಂಡ ಅರ್ಥವ್ಯತ್ಯಾಸದ ಬಗೆ
A) ಅರ್ಥ ಸಂಕೋಚ B) ಅರ್ಥೋತ್ಕರ್ಷ
C) ಅರ್ಥಾಂತರ D) ಅರ್ಥವಿಸ್ತಾರ

32. ರೂಪಕಸಾಮ್ರಾಜ್ಯ ಚಕ್ರವರ್ತಿ" ಎಂಬ ಹೊಗಳಿಕೆಗೆ ಪಾತ್ರನಾದ ಕವಿ
A) ಲಕ್ಷ್ಮೀಶ B) ಕುಮಾರವ್ಯಾಸ
C) ಕುಮಾರ ವಾಲ್ಮೀಕಿ D) ರಾಘವಾಂಕ

33. ಇವರು ಸ್ತ್ರೀವಾದಿ ವಿಮರ್ಶಕರು
A) ಡಿ. ಆರ್. ನಾಗರಾಜ B) ಜಿ. ಎಸ್. ಆಮೂರ
C) ವಿಜಯಾ ದಬ್ಬೆ D) ತ್ರಿವೇಣಿ

34. ಚೌಡಕಿಯವರು ಹಾಡುವ ಕಾವ್ಯ
A) ಎಲ್ಲಮ್ಮನ ಕಾವ್ಯ B) ಮಂಟೇಸ್ವಾಮಿ ಕಾವ್ಯ
C) ಮಲೆಯ ಮಹದೇಶ್ವರ ಕಾವ್ಯ D) ಜುಂಜಪ್ಪನ ಕಾವ್ಯ

35. ಪ್ರಾಚೀನ ಶಿಕ್ಷಣ ಪದ್ಧತಿಯನ್ನು ಸಾರುವ ಶಾಸನ
A) ಬೊಪ್ಪಣನ ಶಾಸನ B) ಶ್ರವಣಬೆಳಗೊಳ ಶಾಸನ
C) ನಾಗಾಯಿ ಶಾಸನ D) ಕುವರಲಕ್ಷ್ಮನ ಶಾಸನ

36. "ಪತ್ರಿಕೆಯ ಆತ್ಮ" ಎಂಬ ಹೆಗ್ಗಳಿಕೆಗೆ ಪಾತ್ರವಾದುದು

A) ವರದಿ B) ನುಡಿಚಿತ್ರ C) ಸಂದರ್ಶನ D) ಅಪರಾಧ ಸುದ್ದಿಗಳು

37. ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರದ ಕುರಿತಾಗಿ ಬಂದ ಮೊದಲ ಕೃತಿ

A) ಕನ್ನಡ ಗ್ರಂಥ ಸಂಪಾದನೆ

B) ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರ

C) ಭಾರತೀಯ ಗ್ರಂಥ ಸಂಪಾದನಾ ಪರಿಚಯ

D) ಪ್ರಾಚೀನ ಗ್ರಂಥ ಸಂಪಾದನೆ

38. 1) ನಾವು ಸಂಶೋಧಕನನ್ನು ಗುರುತಿಸುವುದು ಅವನು ಕಂಡು ಹಿಡಿದ ಸತ್ಯದಿಂದಲ್ಲ: ಆ ಸತ್ಯವನ್ನು ಕಂಡು ಹಿಡಿಯಲು ಮಾಡುವ ಪ್ರಯತ್ನದಿಂದ

2) ಸಂಶೋಧಕನಿಗೆ ಸತ್ಯ ಸಂಗತಿ ಹೊರಕ್ಕೆ ಬರುವುದೇ ಮುಖ್ಯ ಹೊರತು ಹೊರಕ್ಕೆ ತಂದವನು ಯಾರು ಎಂಬುದು ಮುಖ್ಯವಲ್ಲ.

ಸರಿಯಾದ ಉತ್ತರ

A) ಮೊದಲ ಹೇಳಿಕೆ ತಪ್ಪು, ಎರಡನೇ ಹೇಳಿಕೆ ಸರಿ

B) ಮೊದಲ ಹೇಳಿಕೆ ಸರಿ, ಎರಡನೇ ಹೇಳಿಕೆ ತಪ್ಪು

C) ಎರಡು ಹೇಳಿಕೆಗಳೂ ಸರಿ

D) ಎರಡು ಹೇಳಿಕೆಗಳೂ ತಪ್ಪು

39. ಇವುಗಳಲ್ಲಿ ಕನ್ನಡ ಭಾಷೆಯಲ್ಲಿರುವ ಕಾವ್ಯಲಕ್ಷಣ ಗ್ರಂಥಗಳು

1. ಉದಯಾದಿತ್ಯಾಲಂಕಾರ
2. ಕಾವ್ಯಾಲಂಕಾರ
3. ಕಾವ್ಯ ಪ್ರಕಾಶ
4. ಅಪ್ರತಿಮವೀರಚರಿತ

ಸರಿಯಾದ ಉತ್ತರ:

A) 1 ಮತ್ತು 2 B) 3 ಮತ್ತು 4 C) 2 ಮತ್ತು 3 D) 1 ಮತ್ತು 4

40. ಇವುಗಳಲ್ಲಿ ಕೃದಂತ ಪದ

A) ಹೊಣೆಗಾರಿಕೆ, ದೊಡ್ಡತನ B) ಮಡಿವಂತ, ಉನ್ನತಿಕೆ

C) ನೋಡುವಿಕೆ, ಹೇಳಿದುದು D) ಇಕ್ಕಟ್ಟು, ಮುಪ್ಪುರಿ

41. ಸಾಂಗತ್ಯ ಛಂದೋಬಂಧದ ಪದ್ಯವೊಂದರ ಗಣ ಸಂಖ್ಯೆ

A) ಹತ್ತು B) ಹದಿನಾಲ್ಕು C) ಹದಿನಾರು D) ಹದಿನೆಂಟು

42. ಇದು ಮಧ್ಯದ್ರಾವಿಡ ಭಾಷಾವರ್ಗಕ್ಕೆ ಸೇರಿದ ಭಾಷೆ

A) ಕೊಡವ B) ಕನ್ನಡ C) ಕುರುಖ್ D) ಗದಬ

43. “ನರ್ಸುಗಳು ಡಾಕ್ಟರರು ಹೆರಿಗೆ ಮನೆಯೊಳಹೊರಗೆ
ಅವರ ಬೆನ್ನಿಗೆ ಸದಾ ನಾಲ್ಕು ಮಂದಿ”– ಈ ಸಾಲುಗಳನ್ನು ಬರೆದ ಕವಿ

A) ಗೋಪಾಲ ಕೃಷ್ಣ ಅಡಿಗ B) ಕುವೆಂಪು
C) ಎ.ಕೆ. ರಾಮಾನುಜನ್ D) ಬಿ.ಎಂ.ಶ್ರೀ

44. ಎರಡನೇ ನಾಗವರ್ಮನು ರಚಿಸಿದ ಲಕ್ಷಣ ಗ್ರಂಥ

A) ಅಪ್ರತಿಮ ವೀರಚರಿತೆ B) ರಸರತ್ನಾಕರ
C) ಕಾವ್ಯಾವಲೋಕನ D) ಶೃಂಗಾರ ರತ್ನಾಕರ

45. ‘ಕರ್ಣಾಟಕ ಸಂಸ್ಕೃತಿ.ಸಮೀಕ್ಷೆ’ ಗ್ರಂಥದ ಕರ್ತೃ

A) ಎಂ. ಚಿದಾನಂದ ಮೂರ್ತಿ B) ಎಚ್. ತಿಪ್ಪೇರುದ್ರ ಸ್ವಾಮಿ
C) ಎಂ.ಎಂ ಕಲ್ಬುರ್ಗಿ D) ಎಚ್.ಎಂ ಚನ್ನಯ್ಯ

46. ವಸಾಹತೋತ್ತರ ಚಿಂತನೆಯ ಪ್ರಮುಖ ಚಿಂತಕ

A) ಎಡ್ವರ್ಡ್ ಸಯೀದ್ B) ರೇಮಂಡ್ ವಿಲಿಯಂಸ್
C) ಜಾರ್ಜ್ ಲುಕಾಸ್ D) ಅಯ್. ಎ. ರಿಚರ್ಡ್ಸ್

47. ಇದು ಅನ್ಯದೇಶೀಯ ಪದ

A) ತಿಂಗಳು B) ಕಾಗದ C) ಕಣ್ಣು D) ಕಾಲು

48. ರನ್ನ ಕವಿಯ ಆಶ್ರಯದಾತ

A) ರಾಷ್ಟ್ರಕೂಟ ಕೃಷ್ಣ B) ಕಲಚೂರ್ಯ ಬಿಜ್ಜಳ
C) ಚಾಲುಕ್ಯ ಸತ್ಯಾಶ್ರಯ ತೈಲಪ D) ಚಾಲುಕ್ಯ ಜಗದೇಕಮಲ್ಲ

49. ಹರಿಹರನ ಪುರಾತನ ರಗಳೆಗಳಿಗೆ ಆಕರವಾದ ಗ್ರಂಥ

A) ಮಹಾ ಪುರಾಣಂ B) ಪೆರಿಯ ಪುರಾಣಂ
C) ಕುಮಾರ ಸಂಭವಂ D) ಶಿಲಪ್ಪದಿಕಾರಂ

50. ಹೊಂದಿಕೆಯಾದುದನ್ನು ಆರಿಸಿರಿ

A) ವರ್ಣಗಣ ಪ್ರಧಾನ ಪಿರಿಯಕ್ಕರ
B) ಪಂಚಮಾತ್ರಾಗಣ ಪ್ರಧಾನ ಭಾಮಿನಿ ಷಟ್ಪದಿ
C) ರುದ್ರಗಣ ಪ್ರಧಾನ ಸಾಂಗತ್ಯ
D) ಚತುರ್ಮಾತ್ರಾಗಣ ಪ್ರಧಾನ ಮಂದಾನಿಲ ರಗಳೆ

51. ಈಡಿಪಸ್ ನಾಟಕವನ್ನು ಕನ್ನಡಕ್ಕೆ ಭಾಷಾಂತರಿಸಿದವರು

A) ಕೆ. ಮರಳಸಿದ್ದಪ್ಪ B) ಶ್ರೀರಂಗ
C) ಪಿ.ಲಂಕೇಶ್ D) ಟಿ.ಪಿ. ಕೈಲಾಸಂ

52. “ಎನಿತು ಇನಿದು  ಈ ಕನ್ನಡ ನುಡಿಯು” ಈ ಸಾಲು ಈ ಕವಿಯದು

A) ಕಾವ್ಯಾನಂದ  B) ಆನಂದ ಕಂದ

C) ಕಡೆಂಗೋಡ್ಲು ಶಂಕರ ಭಟ್ಟ  D) ಆನಂದ

53. ಇವುಗಳಲ್ಲಿ ಸರಿಯಾದ ಜೋಡಿಗಳು ಯಾವುದು ?

| | | |
|---|---|---|
| 1. | ಇಮ್ಯಾಜಿನೇಷನ್ | ಟಿ.ಎಸ್.ಎಲಿಯಟ್ |
| 2. | ವಕ್ರೋಕ್ತಿ | ಕುಂತಕ |
| 3. | ಕಾವ್ಯ ಪ್ರತಿಮೆ | ಸಿ ಡೆ ಲೂಯಿ |
| 4. | ರೀತಿ | ಆನಂದವರ್ಧನ |

ಸರಿಯಾದ ಉತ್ತರ

A) 1 ಮತ್ತು 2  B) 2 ಮತ್ತು 4  C) 3 ಮತ್ತು 4  D) 2 ಮತ್ತು 3

54. ಗ್ರಂಥ ಸಂಪಾದನೆಯಲ್ಲಿ ಯಾವುದನ್ನು “ಮೂಲ ಪ್ರತಿ” ಎಂದು ತಿಳಿಯಲಾಗುತ್ತದೆ.

A) ಪರಂಪರಾಗತ ಪ್ರತಿ  B) ಶುದ್ಧ ಸಂತಾನ ಪ್ರತಿ

C) ಕವಿ ಹಸ್ತಾಕ್ಷರ ಪ್ರತಿ  D) ಸಂರಕ್ಷಿತ ಹಸ್ತ ಪ್ರತಿ

55. 1) ಮೋನಿಟರ್, ಕೀಬೋರ್ಡ್, ಎಲೆಕ್ಟ್ರಾನಿಕ್ ಭಾಗಗಳು ಮುಂತಾದವುಗಳನ್ನು “ಸಾಫ್ಟ್‌ವೇರ್” ಎಂದು ಕರೆಯಲಾಗುತ್ತದೆ.

2) ವೇಗ ಹಾಗೂ ಏಕರೀತಿಯ ಕಾರ್ಯಕ್ಷಮತೆ ಕಂಪ್ಯೂಟರಿನ ವೈಶಿಷ್ಟ್ಯ

ಸರಿಯಾದ ಉತ್ತರ

A) ಒಂದನೇ ಹೇಳಿಕೆ ಸರಿ, ಎರಡನೇ ಹೇಳಿಕೆ ತಪ್ಪು

B) ಎರಡನೇ ಹೇಳಿಕೆ ಸರಿ, ಒಂದನೇ ಹೇಳಿಕೆ ತಪ್ಪು

C) ಎರಡೂ ಹೇಳಿಕೆಗಳೂ ತಪ್ಪು

D) ಎರಡೂ ಹೇಳಿಕೆಗಳು ಸರಿ.

56. ಭಾಷಾಂತರದ ಬಗೆಗಳಲ್ಲಿ ಮೂಲಕ್ಕೆ ಅತ್ಯಂತ ದೂರವಾದ ಭಾಷಾಂತರ

A) ಶಬ್ದಾನುವಾದ  B) ಅರ್ಥಾನುವಾದ

C) ರೂಪಾಂತರ  D) ನಿಕಟಾನುವಾದ

57. ಇವರು ಜನಪದ ವೃತ್ತಿ ಗಾಯಕರು

A) ತೊಗಲು ಗೊಂಬೆಯಾಟದವರು  B) ಚೌಡಿಕೆಯವರು

C) ಗೊಂದಲಿಗರು  D) ಕಂಸಾಳೆಯವರು

58. ಅಂಶಗಣ ಪ್ರಧಾನ ಛಂದೋರೂಪ

A) ಕಂದ  B) ಮತ್ತೇಭವಿಕ್ರೀಡಿತ

C) ನಡುವಣಕ್ಕರ  D) ಪ್ರಗಾಥ

59. “ಭವ್ಯತೆ” ಪರಿಕಲ್ಪನೆಯ ಪ್ರತಿಪಾದಕ

A) ಲಾಂಜಿನಸ್ B) ಅರಿಸ್ಟಾಟಲ್ C) ಕಾಲ್‌ರಿಜ್ D) ಕ್ರೋಚೆ

60. “ಪ್ರಭುಲಿಂಗಲೀಲೆ” ಕಾವ್ಯದ ಛಂದಸ್ಸು

A) ವಾರ್ಧಕ ಷಟ್ಪದಿ B) ಕುಸುಮ ಷಟ್ಪದಿ

C) ಭಾಮಿನಿ ಷಟ್ಪದಿ D) ಪರಿವರ್ಧಿನಿ ಷಟ್ಪದಿ

61. ಇವುಗಳಲ್ಲಿ ಹೊಸಗನ್ನಡ ಛಂದೋರೂಪ

A) ಏಳೆ B) ಮಹಾಛಂದಸ್ಸು C) ತ್ರಿಪದಿ D) ಗೀತಿಕೆ

62. ಕನ್ನಡ ಪತ್ರಿಕೋದ್ಯಮದ ಪಿತಾಮಹ

A) ಕಿಟೆಲ್ B) ಇ.ಪಿ ರೈಸ್ C) ವುರ್ಥ್ D) ಮೋಗ್ಲಿಂಗ್

63. ಆದಿಪ್ರಾಸವನ್ನು ಬಿಟ್ಟ ಕನ್ನಡದ ಮೊದಲ ಕವಿ

A) ಗೋವಿಂದ ಪೈ B) ಹರಿಹರ

C) ಹಟ್ಟಿಯಂಗಡಿ ನಾರಾಯಣ ರಾಯ D) ಪಂಜೆ ಮಂಗೇಶ ರಾವ್

64. “ಪಂಪರಾಮಾಯಣ” ಕೃತಿಯನ್ನು ಮೊತ್ತ ಮೊದಲು ಸಂಪಾದಿಸಿದವರು.

A) ಅನಂತರಂಗಾಚಾರ್ B) ಡಿ.ಎಲ್. ನರಸಿಂಹಾಚಾರ್

C) ಬಿ.ಎಲ್.ರೈಸ್ D) ರಾಬರ್ಟ್ ಕಾಲ್ಡವೆಲ್

65. ತಿರುಕೊಳವಿನಾಚಿಯ ಪ್ರಸಂಗ ಯಾವ ಕಾವ್ಯದಲ್ಲಿದೆ?

A) ರಾಜಶೇಖರ ವಿಳಾಸ B) ಮೋಹನತರಂಗಿಣಿ

C) ಸುಕುಮಾರ ಚರಿತ D) ವರ್ಧಮಾನ ಪುರಾಣ

66. 1. ಜುಂಜಪ್ಪ ಮಹಾಕಾವ್ಯವು ಮೂರು ತಲೆಮಾರುಗಳ ಕಥೆಯನ್ನು ಒಳಗೊಂಡಿದೆ

2. ಜುಂಜಪ್ಪನ ಪುರಾಣದಲ್ಲಿ ಕಾಡುಗೊಲ್ಲರ ಸಾಂಸ್ಕೃತಿಕ ಮೂಲಾಂಶವನ್ನು ಕಾಣಬಹುದಾಗಿದೆ.

ಸರಿಯಾದ ಉತ್ತರ

A) ಒಂದನೇ ಹೇಳಿಕೆ ತಪ್ಪು, ಎರಡನೇ ಹೇಳಿಕೆ ಸರಿ

B) ಎರಡು ಹೇಳಿಕೆಗಳೂ ತಪ್ಪು

C) ಎರಡು ಹೇಳಿಕೆಗಳೂ ಸರಿ

D) ಒಂದನೇ ಹೇಳಿಕೆ ಸರಿ, ಎರಡನೇ ಹೇಳಿಕೆ ತಪ್ಪು

67. ಸರಿಯಾದ ಕಾಲಾನುಕ್ರಮವನ್ನು ಗುರುತಿಸಿರಿ.

A) ಟಿ.ಎಸ್. ಇಲಿಯಟ್, ಮ್ಯಾಥ್ಯೂ ಅರ್ನಾಲ್ಡ್, ಎಜ್ರಾಪೌಂಡ್, ಅಯ್. ಎ. ರಿಚರ್ಡ್ಸ್

B) ಮ್ಯಾಥ್ಯೂ ಅರ್ನಾಲ್ಡ್, ಎಜ್ರಾಪೌಂಡ, ಟಿ.ಎಸ್. ಇಲಿಯಟ್ ಅಯ್.ಎ. ರಿಚರ್ಡ್ಸ್

C) ಅಯ್.ಎ.ರಿಚರ್ಡ್ಸ್, ಮ್ಯಾಥ್ಯೂ ಅರ್ನಾಲ್ಡ್, ಎಜ್ರಾಪೌಂಡ್, ಟಿ.ಎಸ್. ಇಲಿಯಟ್

D) ಮ್ಯಾಥ್ಯೂ ಅರ್ನಾಲ್ಡ್, ಅಯ್. ಎ ರಿಚರ್ಡ್ಸ್, ಟಿ.ಎಸ್. ಇಲಿಯಟ್, ಎಜ್ರಾಪೌಂಡ್

68. ಕೆಳಗೆ ಕೊಟ್ಟಿರುವ ಕೃತಿಗಳ ಮುಂದೆ ಕರ್ತೃಗಳ ಹೆಸರು ಕೊಡಲಾಗಿದೆ ಅವುಗಳಲ್ಲಿ ಸರಿಯಾದವುಗಳನ್ನು ಗುರುತಿಸಿರಿ

| | | |
|---|---|---|
| 1. | ಶಾಂತಿ ಪುರಾಣ | ಪೊನ್ನ |
| 2. | ಸಮಯ ಪರೀಕ್ಷೆ | ನಯಸೇನ |
| 3. | ಸೂಕ್ತಿ ಸುಧಾರ್ಣವ | ಷಡಕ್ಷರದೇವ |
| 4. | ಉದ್ಭಟ ಕಾವ್ಯ | ಸೋಮರಾಜ |

ಸರಿಯಾದ ಉತ್ತರ

A) 1 ಮತ್ತು 2 B) 3 ಮತ್ತು 4 C) 1 ಮತ್ತು 4 D) 2 ಮತ್ತು 4

69. ಈ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ.

| | | |
|---|---|---|
| A) | ವಡ್ಡಾರಾಧನೆ | ಸುಕುಮಾರ ಸ್ವಾಮಿಯ ಕಥೆ |
| B) | ಚಾಮುಂಡರಾಯ ಪುರಾಣ | ಚಂಪೂಗ್ರಂಥ |
| C) | ಸೋಮನಾಥ ಚರಿತೆ | ಚಂಡಶಾಸನ ಕಥೆ |
| D) | ಭರತೇಶ ವೈಭವ | ಗದ್ಯಗ್ರಂಥ |

70. ಈ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ

| | | |
|---|---|---|
| A) | ಬಸವ ಪುರಾಣ | ಭೀಮಕವಿ |
| B) | ಚೆನ್ನಬಸವ ಪುರಾಣ | ಕೆರೆಯ ಪದ್ಮರಸ |
| C) | ಕನ್ನಡ ಭಾಗವತ | ಚಾಟುವಿಠಲನಾಥ |
| D) | ಮುಡಿಗೆಯ ಅಷ್ಟಕ | ಹರಿಹರ |

71. ಕೆಳಗೆ ಕೊಟ್ಟಿರುವವುಗಳಲ್ಲಿ ನವ್ಯಕಥೆಗಳು ಯಾವುವು?

1. ಕ್ಷಿತಿಜ
2. ಅಮಾಸ
3. ಕತೆಯಾದಳು ಹುಡುಗಿ
4. ಕೊನೆಯ ಗಿರಾಕಿ

ಸರಿಯಾದ ಉತ್ತರ:

A) 1 ಮತ್ತು 4 B) 2 ಮತ್ತು 4 C) 2 ಮತ್ತು 3 D) 1 ಮತ್ತು 3

72. ಇವುಗಳಲ್ಲಿ "ಆತ್ಮ ಚರಿತ್ರೆ" ಪ್ರಕಾರಕ್ಕೆ ಸೇರಿದ ಕೃತಿ

A) ಸಂಜೆಗಣ್ಣಿನ ಹಿನ್ನೋಟ B) ಹಮ್ಮು ಮತ್ತು ಬಿಮ್ಮು

C) ಭುವನದ ಭಾಗ್ಯ D) ಚಿರಸ್ಮರಣೆ

73. ಇವುಗಳಲ್ಲಿ ಅಸಮಾವೇಶಕ ಸರ್ವನಾಮಗಳು

| | |
|---|---|
| 1. ಎಂಕುಳು | ತುಳು |
| 2. ಮನಮು | ತೆಲುಗು |
| 3. ಞಙ್ಙಳ್ | ಮಲೆಯಾಳ |
| 4. ನಾಮ್ | ತಮಿಳು |

ಸರಿಯಾದ ಉತ್ತರ:

A) 1 ಮತ್ತು 2 B) 2 ಮತ್ತು 3 C) 1 ಮತ್ತು 3 D) 2 ಮತ್ತು 4

74. ಹಳಗನ್ನಡ ಕಾವ್ಯಗಳನ್ನು ಕುರಿತು ಸಂಶೋಧನೆ ಮಾಡಿದವರು

1. ವೆಂಕಟಾಚಲ ಶಾಸ್ತ್ರಿ
2. ಕೀರ್ತಿನಾಥ ಕುರ್ತಕೋಟಿ
3. ಬಿ.ಸಿ. ರಾಮಚಂದ್ರ ಶರ್ಮ
4. ಡಿ.ಎಲ್.ನರಸಿಂಹಾಚಾರ್

ಸರಿಯಾದ ಉತ್ತರ:

A) 1 ಮತ್ತು 4 B) 2 ಮತ್ತು 3 C) 3 ಮತ್ತು 4 D) 1 ಮತ್ತು 2

75. ಇವು ಪುರುಷವಾಚಕ ಸರ್ವನಾಮಗಳು

1. ನಾನು, ನೀವು
2. ಯಾವನು, ಯಾರು
3. ನಾವು, ಅವರು
4. ತಾನು, ತಾವು

ಸರಿಯಾದ ಉತ್ತರ

A) 1 ಮತ್ತು 2 B) 2 ಮತ್ತು 3 C) 1 ಮತ್ತು 3 D) 2 ಮತ್ತು 4

76. ಇವುಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ

A) ತಮ್ಮನು ಮನೆಗೆ ಹೋಗಿರಬಹುದು – ಪ್ರೇರಣಾರ್ಥಕ

B) ತಂಗಿಯು ಚೆನ್ನಾಗಿ ಹಾಡುತ್ತಾಳೆ – ವಿಧ್ಯರ್ಥಕ

C) ಸತ್ಯವಂತರು ಸುಳ್ಳು ಹೇಳರು – ನಿಷೇಧಾತ್ಮಕ

D) ಕವಿಯಿಂದ ಕಾವ್ಯವನ್ನು ಬರೆಸಲಾಯಿತು – ಸಂಭಾವನಾರ್ಥಕ

77. ಇವುಗಳಲ್ಲಿ ಹೊಂದಾಣಿಕೆಯಾದುದನ್ನು ಗುರುತಿಸಿರಿ.

| | |
|---|---|
| A) ಸರಸ | ವಿಷ್ಣುಗಣ |
| B) ಸರಾಗ | ಬ್ರಹ್ಮಗಣ |
| C) ಶ್ರೀನಿವಾಸ | ಚತುರ್ಮಾತ್ರಾಗಣ |
| D) ಮಾತಾಮಹ | ರುದ್ರಗಣ |

78. ಇವು ಭಾಷಾಂತರ ಸ್ವೀಕರಣಗಳು

1. ಮಸೀದಿ, ಆಸಾಮಿ
2. ವಿಧಿಬಿಂದು, ವಿಕೇಂದ್ರೀಕರಣ
3. ಶೀತಲ ಸಮರ. ಕ್ಷಕಿರಣ
4. ನೇಹ, ಬಿಜ್ಜೆ

ಸರಿಯಾದ ಉತ್ತರ

A) 2 ಮತ್ತು 3 B) 1 ಮತ್ತು 4 C) 3 ಮತ್ತು 4 D) 1 ಮತ್ತು 2

79. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುತ್ತದೆ

| | | |
|---|---|---|
| A) | ದೇಶ್ಯ ಶಬ್ದಗಳು | ಸ್ನೇಹ, ಮಲಿನ |
| B) | ಅನ್ಯದೇಶ್ಯ ಶಬ್ದಗಳು | ನಾಜೂಕು, ಗಲೀಜು |
| C) | ಸಂಸ್ಕೃತ | ಅಸಡ್ಡೆ, ದಾಡೆ |
| D) | ತದ್ಭವ | ಬೆಣ್ಣೆ, ಕಬ್ಬಿಣ |

80. ಮೊದಲು ಅಂಶಗಣಾತ್ಮಕವಾಗಿದ್ದು ಬಳಿಕ ಮಾತ್ರಾಗಣಾತ್ಮಕವಾದ ಛಂದೋರೂಪ

A) ಕಂದ B) ಸಾಂಗತ್ಯ C) ಷಟ್ಪದಿ D) ಏಳೆ

81. ಇದೊಂದು ವೀರಗಲ್ಲು ಶಾಸನ

A) ಕುವರಲಕ್ಷ್ಮನ ಶಾಸನ B) ಹಲ್ಮಿಡಿ ಶಾಸನ
C) ಆತಕೂರು ಶಾಸನ D) ಬೊಪ್ಪಣನ ಶಾಸನ

82. ಬಿರಿಕು>ಬಿರುಕು – ಇಲ್ಲಿ ಕಾಣುವ ಧ್ವನಿ ವ್ಯತ್ಯಾಸ

A) ಇ/ಎ ವ್ಯತ್ಯಯ B) ಉ/ಒ ವ್ಯತ್ಯಯ
C) ಸ್ವರಾನುರೂಪತೆ D) ಪರಿಹಾರದೀರ್ಘೀಕರಣ

83. ಇದೊಂದು ಕನ್ನಡದ ಸಾಮಾಜಿಕ ಉಪಭಾಷೆ

A) ರಾಯಚೂರು ಕನ್ನಡ B) ಮಂಗಳೂರು ಕನ್ನಡ
C) ಧಾರವಾಡ ಕನ್ನಡ D) ಸೋಲಿಗ ಕನ್ನಡ

84. "ಬಡವಂ ಪಾರ್ವನಪತ್ಯಶೋಕವಿಕಳಂ ಬಂದೆನ್ನನೀಯಂದದಿಂ"
ಇದು ಯಾವ ವೃತ್ತಕ್ಕೆ ಉದಾಹರಣೆಯಾಗಿದೆ?

A) ಪಿರಿಯಕ್ಕರ B) ಮಹಾಸ್ರಗ್ಧರೆ
C) ಮತ್ತೇಭವಿಕ್ರೀಡಿತ D) ಚಂಪಕಮಾಲೆ

85. ಸಂಸ್ಕೃತದೊಡನೆ ಹೋಲಿಸಿದಾಗ ಇದೊಂದು ದ್ರಾವಿಡ ಭಾಷೆಯ ವೈಲಕ್ಷಣ್ಯವಾಗಿದೆ

A) ವಿಶೇಷಣಗಳಿಗೆ ವಿಭಕ್ತಿ ಪ್ರತ್ಯಯವನ್ನು ಹಚ್ಚುವುದಿಲ್ಲ
B) ಕರ್ತರಿ ಪ್ರಯೋಗ
C) ತದ್ಧಿತಪ್ರತ್ಯಯಗಳು
D) ಕೃತ್‌ಪ್ರತ್ಯಯಗಳು.

86. ಇವು ಕನ್ನಡದ ಆಧುನಿಕ ಮಹಾಕಾವ್ಯಗಳು

1. ಗೊಲ್ಗೊಥಾ
2. ಶ್ರೀರಾಮಾಯಣ ದರ್ಶನಂ
3. ಚಿತ್ರಾಂಗದಾ
4. ಭಾರತ ಸಿಂಧುರಶ್ಮಿ

ಸರಿಯಾದ ಉತ್ತರ

A) 1 ಮತ್ತು 3 B) 2 ಮತ್ತು 3 C) 1 ಮತ್ತು 4 D) 2 ಮತ್ತು 4

87. "ಮಾರ್ಫಾಲಜಿ ಆಫ್ ಫೋಕ್ ಟೇಲ್" ಎಂಬ ಗ್ರಂಥವನ್ನು ರಚಿಸಿದವರು

A) ಈಲಿಯಾಸ್ ಲೊನ್ರಾಟ್ B) ವಿ.ಜೆ. ಪ್ರಾಪ್

C) ಲಾರಿ ಹಾಂಕೊ D) ಪೀಟರ್ ಜೆಕ್ಲಾಸ್

88. ರಸಸಿದ್ಧಾಂತದ ಪ್ರತಿಪಾದಕರು

A) ವಾಮನ B) ಕುಂತಕ C) ಭಾಮಹ D) ವಿಶ್ವನಾಥ

89. ಇವರು ಪ್ರಗತಿಶೀಲ ಪಂಥದ ಲೇಖಕರು

A) ಬಸವರಾಜ ಕಟ್ಟೀಮನಿ B) ಆಲನಹಳ್ಳಿ ಕೃಷ್ಣ

C) ದೇವನೂರು ಮಹಾದೇವ D) ರಾಮಚಂದ್ರ ಶರ್ಮ

90. "ನನ್ನ ನಲ್ಲ" ಕವನಸಂಕಲನದ ಕರ್ತೃ

A) ದ.ರಾ ಬೇಂದ್ರೆ B) ಡಿ.ಆರ್. ನಾಗರಾಜ

C) ಮಧುರ ಚೆನ್ನ D) ಪು.ತಿ.ನ

91. ಕನ್ನಡದ ಪ್ರಾಚೀನತೆಗೆ ಒಂದು ದಾಖಲೆಯಾಗಿ ಗುರುತಿಸಿರುವ "ಇಸಿಲ" ಎಂಬ ಪದ ಮೊದಲಿಗೆ ಎಲ್ಲಿ ಕಂಡು ಬರುತ್ತದೆ?

A) ಶಿಲಪ್ಪದಿಗಾರಂ B) ಅಶೋಕನ ಬ್ರಹ್ಮಗಿರಿಯ ಶಾಸನ

C) ವ್ಯಾಸಭಾರತ D) ಕಥಾಸರಿತ್ಸಾಗರ

92. ಇವುಗಳಲ್ಲಿ ಕನ್ನಡದ ಮುಕ್ತ ಆಕೃತಿಮಾಗಳು

A) ನೇಸರು, ಮಲೆ B) ಬಡತನ, ಬುದ್ಧಿವಂತಿಕೆ

C) ಪ್ರಚಾರಕ, ಧೀಮಂತ D) ಆಸ್ಪತ್ರೆ, ರಸ್ತೆ

93. "ಕರ್ನಾಟಕ" ಪದದ ವ್ಯುತ್ಪತ್ತಿ ಬಗ್ಗೆ ಆರ್. ನರಸಿಂಹಾಚಾರ್ಯರ ಅಭಿಮತ

A) ಕರು + ನಾಡು B) ಕನ್ + ನಾಡು

C) ಕಮ್ಮಿತು + ನಾಡು D) ಕರ್ + ನಾಡು

94. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆಯಾಗುವುದಿಲ್ಲ?

A) ಕನಕದಾಸ – ಬೇವು ಬೆಲ್ಲದೊಳಿಡಲೇನು ಫಲ

B) ಜನ್ನ – ಮಾಡಿದುದಂ ನಾವುಣ್ಣದೆ ಪೋಕುಮೆ

C) ಪುರಂದರದಾಸ – ಗಿಳಿಯು ಪಂಜರದೊಳಿಲ್ಲ

D) ಕುಮಾರವ್ಯಾಸ – ಹಸಿದ ಮಾರಿಯ ಮಂದೆಯಲಿ ಕುರಿ ನುಸುಳಿದಂತಾದೆನು

95. ಇವು ತ.ರಾ.ಸು ಅವರ ಕಾದಂಬರಿಗಳು

1. ಮುಕ್ತಿ, ಮೂರುದಾರಿಗಳು
2. ರಕ್ತ ತರ್ಪಣ, ಪುರುಷಾವತಾರ
3. ಬಿಡುಗಡೆಯ ಬೇಡಿ, ಮಸಣದ ಹೂ
4. ಬೆಕ್ಕಿನ ಕಣ್ಣು, ಗೆಜ್ಜೆಪೂಜೆ

ಸರಿಯಾದ ಉತ್ತರ:

A) 1 ಮತ್ತು 4 B) 2 ಮತ್ತು 3 C) 3 ಮತ್ತು 4 D) 1 ಮತ್ತು 2

96. ಇವುಗಳಲ್ಲಿ ಆಧುನೀಕರಣಕ್ಕೆ ಉದಾಹರಣೆ

A) ಪೊಡವಿ, ಸಡಿಲ B) ಹೊಂದು, ಸಭಿಕ

C) ಪಲಸು, ಹಲಸು D) ಆಕಾಶವಾಣಿ, ಆಕ್ಸಿಡೆಂಟ್ ಮಾಡು

97. ಇವು "ಲಲಿತ ಪ್ರಬಂಧ" ಸಾಹಿತ್ಯ ಪ್ರಕಾರಕ್ಕೆ ಸೇರಿದ ಕೃತಿಗಳು

A) ಗಂಗೋತ್ರಿ, ಶ್ರೀನಿವಾಸ

B) ಹಗಲುಗನಸುಗಳು, ಮಿನುಗು ಮಿಂಚು

C) ಪ್ರಜ್ಞೆ ಮತ್ತು ಪರಿಸರ, ಭುವನದ ಭಾಗ್ಯ

D) ಸಂಭಾವನೆ, ಸಮಾಲೋಕನ

98. ನಿಂದಿಸುವರ್ ದುರ್ಜನರೆಂ
ಬೊಂದು ಭಯಂಬೆತ್ತು ಸುಕವಿ ರಚಿಸನೆ ಕೃತಿಯಂ
ಮಂದೇಹರಭಯದಿಂದರ
ವಿಂದಸಖಂ ನಿಜಮಯೂಖಮಂ ಪಸರಿಸನೇ – ಇಲ್ಲಿರುವ ಅಲಂಕಾರ

A) ದೃಷ್ಟಾಂತ B) ದೀಪಕ

C) ರೂಪಕ D) ಉತ್ಪ್ರೇಕ್ಷೆ

99. ೨೧ನೇ ಶತಮಾನದಲ್ಲಿ "ರಾಷ್ಟ್ರಕವಿ" ಪ್ರಶಸ್ತಿಗೆ ಪಾತ್ರರಾದವರು

A) ಕುವೆಂಪು B) ದ.ರಾ ಬೇಂದ್ರೆ

C) ಜಿ.ಎಸ್. ಶಿವರುದ್ರಪ್ಪ D) ಗೋವಿಂದ ಪೈ

100. ಇವುಗಳಲ್ಲಿ ಸರಿಯಾದ ಜೋಡಿಗಳನ್ನು ಗುರುತಿಸಿರಿ.

| | | |
|---|---|---|
| 1. | ಎನ್, ಎವು | ತದ್ಧಿತ ಪ್ರತ್ಯಯಗಳು |
| 2. | ಗಳು, ಅಂದಿರು | ವಚನ ಪ್ರತ್ಯಯಗಳು |
| 3. | ಇನ್, ಒಳ್ | ವಿಭಕ್ತಿ ಪ್ರತ್ಯಯಗಳು |
| 4. | ಇಗ, ವಂತ | ಕೃತ್ ಪ್ರತ್ಯಯಗಳು |

ಸರಿಯಾದ ಉತ್ತರ

A) 1 ಮತ್ತು 3 B) 2 ಮತ್ತು 3 C) 1 ಮತ್ತು 4 D) 2 ಮತ್ತು 4

101. ಇವುಗಳಲ್ಲಿ ಭಾಷಾಂತರಿತ ಕೃತಿಗಳು

1. ಕೆಂಪುಮೀನು, ಹಗ್ಗ
2. ಹಂಸಗೀತೆ, ನಿಸರ್ಗ
3. ಊರುಕೇರಿ, ಉಯ್ಯಾಲೆ
4. ಚಿತ್ರಕನ್ಯೆ, ಚೌಕಟ್ಟಿನ ಮನೆ

ಸರಿಯಾದ ಉತ್ತರ

A) 1 ಮತ್ತು 3 B) 2 ಮತ್ತು 3 C) 3 ಮತ್ತು 4 D) 1 ಮತ್ತು 4

102. ರಚನೆಯ ಕಾಲಾನುಕ್ರಮಕ್ಕೆ ಅನುಗುಣವಾಗಿರುವುದನ್ನು ಗುರುತಿಸಿರಿ.

A) ಗಿರಿಜಾ ಕಲ್ಯಾಣ, ಕಬ್ಬಿಗರ ಕಾವ, ಅಜಿತಪುರಾಣ, ಮಲ್ಲಿನಾಥ ಪುರಾಣ

B) ಅಜಿತ ಪುರಾಣ, ಮಲ್ಲಿನಾಥ ಪುರಾಣ, ಗಿರಿಜಾ ಕಲ್ಯಾಣ, ಕಬ್ಬಿಗರ ಕಾವ

C) ಮಲ್ಲಿನಾಥ ಪುರಾಣ, ಗಿರಿಜಾ ಕಲ್ಯಾಣ, ಕಬ್ಬಿಗರ ಕಾವ, ಅಜಿತ ಪುರಾಣ

D) ಅಜಿತ ಪುರಾಣ, ಕಬ್ಬಿಗರ ಕಾವ, ಗಿರಿಜಾ ಕಲ್ಯಾಣ, ಮಲ್ಲಿನಾಥ ಪುರಾಣ

103. "ಕವಿತ್ವಬೀಜಂ ಪ್ರತಿಭಾನಂ" ಎಂದು ಹೇಳಿದ ಆಲಂಕಾರಿಕ

A) ದಂಡಿ B) ಭಾಮಹ C) ವಿಶ್ವನಾಥ D) ವಾಮನ

104. ಕನ್ನಡ ಭಾಷೆಯ ವಿವಿಧ ಅವಸ್ಥಾ ರೂಪಗಳನ್ನು ಕಾಲಾನುಕ್ರಮದಲ್ಲಿ ಗುರುತಿಸಿರಿ

A) ಪೆಟ್ಟದುಳ್, ಮರದಿಂದ, ಮಾತಿನೊಳ್, ನೆಲವನು

B) ಪೆಟ್ಟದುಳ್, ಮಾತಿನೊಳ್, ನೆಲವನು, ಮರದಿಂದ

C) ಮರದಿಂದ, ಮಾತಿನೊಳ್, ನೆಲವನು, ಪೆಟ್ಟದುಳ್

D) ಪೆಟ್ಟದುಳ್, ಮರದಿಂದ, ಮಾತಿನೊಳ್, ನೆಲವನು

105. 1) ಅಕ್ಕರಮುಂ ವರ್ಣಮುಂ ಎಂದಕ್ಕುಂ ಶುದ್ಧಾಕ್ಷರಕ್ಕೆ ನಾಮಂ

2) ಅಕ್ಷರಗಳೂ ವರ್ಣಗಳೂ ಶುದ್ಧಗೆಗಳಲ್ಲ

ಸರಿಯಾದ ಉತ್ತರ:

A) ಒಂದನೇ ಹೇಳಿಕೆ ತಪ್ಪು, ಎರಡನೇ ಹೇಳಿಕೆ ಸರಿ

B) ಎರಡೂ ಹೇಳಿಕೆಗಳು ತಪ್ಪು

C) ಒಂದನೇ ಹೇಳಿಕೆ ಸರಿ, ಎರಡನೇ ಹೇಳಿಕೆ ತಪ್ಪು

D) ಎರಡೂ ಹೇಳಿಕೆಗಳು ಸರಿ.

106. ಕಾಲದ ದೃಷ್ಟಿಯಿಂದ ಸರಿಯಾದ ಅನುಕ್ರಮವನ್ನು ಗುರುತಿಸಿರಿ

A) ಮುದ್ದಣ, ಲಕ್ಷ್ಮೀಶ, ನಾಗಚಂದ್ರ, ಕುಮಾರವ್ಯಾಸ

B) ಲಕ್ಷ್ಮೀಶ, ನಾಗಚಂದ್ರ, ಮುದ್ದಣ, ಕುಮಾರವ್ಯಾಸ

C) ಕುಮಾರವ್ಯಾಸ, ಮುದ್ದಣ, ಲಕ್ಷ್ಮೀಶ, ನಾಗಚಂದ್ರ

D) ನಾಗಚಂದ್ರ, ಕುಮಾರವ್ಯಾಸ, ಲಕ್ಷ್ಮೀಶ, ಮುದ್ದಣ

107. ಕಾವ್ಯನಾಮ ಮತ್ತು ನಿಜನಾಮದಲ್ಲಿ ಇರುವ ಹೊಂದಿಕೆಯನ್ನು ಗುರುತಿಸಿರಿ

| | | |
|---|---|---|
| 1. | ತ್ರಿವೇಣಿ | ಎಚ್ ಎಸ್ ಅನಸೂಯಾ |
| 2. | ವೈದೇಹಿ | ತಿರುಮಲಾಂಬಾ |
| 3. | ಕಾವ್ಯಾನಂದ | ಸಿದ್ದಯ್ಯ ಪುರಾಣಿಕ |
| 4. | ಮಧುರಚೆನ್ನ | ಚೆನ್ನಮಲ್ಲಪ್ಪಗಲಗಲಿ |

ಸರಿಯಾದ ಉತ್ತರ:

A) 1, 2 ಮತ್ತು 3 B) 2, 3 ಮತ್ತು 4

C) 1, 3 ಮತ್ತು 4 D) 1, 2 ಮತ್ತು 4

108. ಅಭಿಜ್ಞಾನ ಶಾಕುಂತಲವನ್ನು ಕನ್ನಡಕ್ಕೆ ಭಾಷಾಂತರಿಸಿದವರಲ್ಲಿ ಮೊದಲಿಗರು

A) ಚುರಮುರಿ ಶೇಷಗಿರಿರಾಯರು

B) ಬಸವಪ್ಪ ಶಾಸ್ತ್ರಿ

C) ಕೆ ಕೃಷ್ಣಮೂರ್ತಿ

D) ಎಸ್.ವಿ ಪರಮೇಶ್ವರ ಭಟ್ಟ

109. ಗೊರವರು ಯಾವ ದೇವತಾ ಪರಂಪರೆಗೆ ಸಂಬಂಧಿಸಿದವರು

A) ಗೋರಖನಾಥ B) ಮೈಲಾರಲಿಂಗ C) ಪಶುಪತಿ D) ಸಿದ್ಧಪ್ಪಾಜಿ

110. ಇವರಲ್ಲಿ ದಲಿತ ಪಂಥದ ಲೇಖಕರು

A) ರಹಮತ್ ತರೀಕರೆ

B) ಬೊಳುವಾರು ಮಹಮ್ಮದ್ ಕುಞ್ಞಿ

C) ಅರವಿಂದ ಮಾಲಗತ್ತಿ

D) ಚಂದ್ರ ಶೇಖರ ಪಾಟೀಲ

111. ವೈಯಾಕರಣರು ಹೇಳುವಂತೆ ಕನ್ನಡಕ್ಕೆ ಸಹಜವಲ್ಲದ ವರ್ಣಗಳು

A) ಕ, ತ, ಪ B) ಋ, ಶ, ಷ C) ಣ, ನ, ಮ D) ಬಿಂದು, ವಿಸರ್ಗ

112. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಯಾಗುತ್ತದೆ

A) ಅಡಿಗಡಿಗೆ, ಊರೂರು – ಜೋಡು ಪದಗಳು

B) ಕಸಮುಸುರೆ, ಅವಳಿಜವಳಿ – ಅಂಶಿ ಸಮಾಸ

C) ಅಲ್ಲದೆ, ನುಣ್ಣನೆ – ಅವ್ಯಯಗಳು

D) ಓಡುವ ಕುದುರೆ, ಕಂಡವಿಚಾರ – ತತ್ಪುರುಷ ಸಮಾಸ

113. ಮೊಲೆವೆತ್ತ ತೈಲಜನನಿಯ ಕೆಲದೊಳ್ ರಂಜಿಪರೆ ಮೀಸೆವೊತ್ತಣ್ಣಂಗಳ್ –
ಈ ಮಾತು ಬರುವ ಕೃತಿ

A) ಅನಂತನಾಥ ಪುರಾಣ B) ಕರ್ಣಾಟಕ ಪಂಚತಂತ್ರ
C) ತಳಂಗೆರೆ ಶಾಸನ D) ಅಜಿತನಾಥ ಪುರಾಣ

114. ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ – ಈ ಸಂಶೋಧನ ಗ್ರಂಥದ ಕರ್ತೃ

A) ಎಂ.ಎಂ ಕಲ್ಬುರ್ಗಿ B) ಆರ್.ಸಿ, ಹಿರೇಮಠ
C) ಎಸ್.ಸಿ, ನಂದಿಮಠ D) ಎಸ್.ಎಂ ವೃಷಭೇಂದ್ರ ಸ್ವಾಮಿ

115. 'ಪ್ರತಿಭಾನಂ ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧಸೇವಾನುರಾಗಂ ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ" ಈ ಮಾತು ಇರುವ ಕೃತಿ

A) ಶಬ್ದಮಣಿದರ್ಪಣ B) ಕಾವ್ಯಾವಲೋಕನ
C) ಕವಿಜಿಹ್ವಾಬಂಧನ D) ಛಂದೋಂಬುಧಿ

116. ಇವುಗಳಲ್ಲಿ ಅರ್ಥಾಲಂಕಾರ

A) ಅನುಪ್ರಾಸ B) ಯಮಕ C) ಅರ್ಥಾಂತರನ್ಯಾಸ D) ಚಿತ್ರಕವಿತ್ವ

117. ಸರಿಯಾದ ಕಾಲಾನುಕ್ರಮವನ್ನು ಗುರುತಿಸಿರಿ

A) ಶಬ್ದಮಣಿದರ್ಪಣ, ಕವಿರಾಜಮಾರ್ಗ, ಕಾವ್ಯಾವಲೋಕನ, ಛಂದೋಂಬುಧಿ
B) ಕವಿರಾಜಮಾರ್ಗ, ಛಂದೋಂಬುಧಿ, ಕಾವ್ಯಾವಲೋಕನ, ಶಬ್ದಮಣಿದರ್ಪಣ
C) ಛಂದೋಂಬುಧಿ, ಶಬ್ದಮಣಿದರ್ಪಣ, ಕಾವ್ಯಾವಲೋಕನ, ಕವಿರಾಜಮಾರ್ಗ
D) ಕವಿರಾಜಮಾರ್ಗ, ಶಬ್ದಮಣಿದರ್ಪಣ, ಕಾವ್ಯಾವಲೋಕನ, ಛಂದೋಂಬುಧಿ

118. ದ್ರಾವಿಡ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಕೊಡುಗೆ ನೀಡಿದ ವಿದ್ವಾಂಸರು

A) ಎಡ್ವರ್ಡ್ ಸಪೀರ್ B) ಬ್ಲೂಮ್ ಫೀಲ್ಡ್
C) ಬ್ಲಾಕ್ ಮತ್ತು ಟ್ರಾಗರ್ D) ಜೂಲ್ಸ್ ಬ್ಲಾಕ್

119. ಇಲ್ಶೈ > ಎಲೆ: ಕುಳಲ್ > ಕೊಳಲು – ಇಲ್ಲಿ ಕಾಣುವ ಧ್ವನಿ ವ್ಯತ್ಯಾಸ

A) ಸ್ವರವ್ಯತ್ಯಯ B) ಅನುನಾಸಿಕೀಕರಣ
C) ಆದಿಸ್ವರಲೋಪ D) ತಾಲವ್ಯೀಕರಣ

120. ಇವರು ಕನ್ನಡದ ಪ್ರಮುಖ ವಿಮರ್ಶಕರಲ್ಲಿ ಒಬ್ಬರು

A) ಶಾಂತಿನಾಥ ದೇಸಾಯಿ B) ನಿರಂಜನ
C) ಜಿ.ಎಸ್.ಅಮೂರ D) ಕೆ.ವಿ.ಅಯ್ಯರ್

---